Karnataka Bank Ltd.
Your Family Bank. Across India.

Regd. & Head Office
Post Box No.599, Mahaveera Circle
Kankanady
Mangaluru – 575 002

Phone : 0824-2228222
E-Mail : comsec@ktk.bank.in
Website : www.karnatakabank.bank.in
CIN : L85110KA1924PLC001128

SECRETARIAL DEPARTMENT

HO:SEC:133:2026-27 Date: 31.08.2026

The Manager Listing Department **National Stock Exchange of India Limited** Exchange Plaza, C-1, Block G Bandra-Kurla Complex, Bandra (E) MUMBAI - 400051	The Manager Corporate Relationship Department **BSE Limited** Phiroze Jeejeebhoy Towers Dalal Street MUMBAI - 400001

NSE Scrip Code: KTKBANK	**BSE Scrip Code: 532652**

Madam / Dear Sir,

Sub: Newspaper Advertisement in respect of 102nd Annual General Meeting (AGM) of the Bank

Pursuant to Regulations 30, 47 and other applicable provisions of the SEBI (Listing Obligations and Disclosure Requirements) Regulations, 2015 and the general circular no.: 20/2020 dated May 05, 2020 issued by MCA, please find enclosed the copies of newspaper advertisement published in the following newspapers dated 31.08.2026 for the attention of the members of the Bank in respect of information regarding the 102nd Annual General Meeting scheduled to be held on Tuesday, September 22, 2026 at 11:00 A.M. (IST) through Video Conferencing /Other Audio-Visual Means.

1. Business Line (English)
2. Vijaya Karnataka (Kannada)

The same is also being hosted on the website of the Bank under the following web link:
https://www.karnatakabank.bank.in/investors/agms-postal

This is for your kind information and dissemination.

Yours faithfully,

Sham Kanathila Digitally signed by Sham Kanathila
Date: 2026.08.31 10:50:42 +05'30'

Sham K
Company Secretary &
Compliance Officer

Karnataka Bank Ltd.

Your Family Bank. Across India.

Regd. & Head Office : Mahaveera Circle, Kankanady, Mangaluru - 575 002
CIN : L85110KA1924PLC001128, e-mail: investor.grievance@ktk.bank.in
[Website : www.karnatakabank.bank.in Tel. no. 0824-2228222]

102nd ANNUAL GENERAL MEETING (AGM) TO BE HELD THROUGH VC / OAVM

Notice is hereby given that the **102nd Annual General Meeting (AGM)** of the Members of The Karnataka Bank Limited will be convened on **Tuesday, September 22, 2026 at 11.00 A.M.** through Video Conferencing (VC) / Other Audio Visual Means (OAVM) facility to transact the business, as set out in the Notice of the 102nd AGM, in compliance with the applicable provisions of the SEBI (Listing Obligations & Disclosure Requirements) Regulations, 2015 and Companies Act, 2013 and Rules framed thereunder read with General Circular No.: 03/2025 dated September 22, 2025, and SEBI Circular dated October 03, 2024 for conducting AGM without the physical presence of Members at a common venue.

The Notice of the 102nd AGM along with the Annual Report will be sent in due course through electronic mode only, to the Members of the Bank whose email addresses are registered with the Depository Participant / Registrar & Share Transfer Agent (RTA). The Notice of the 102nd AGM and Annual Report for Financial Year 2025-26 will also be made available on the website of the Bank at **https://karnatakabank.bank.in/investors** and on the website of CDSL at **www.evotingindia.com.** Additionally, the notice of AGM and Annual Report will also be available on the website of the Stock Exchanges i.e., BSE Limited (BSE) and National Stock Exchange of India Limited (NSE) at **www.bseindia.com** and **www.nseindia.com** respectively.

Members can attend and participate in the 102nd AGM through VC / OAVM facility only. The Bank will be providing remote e-voting facility to all its members to cast their votes before the date of AGM on the resolutions set out in the Notice of the AGM and also e-voting facility during the AGM. The detailed instructions / procedure with respect to participation and e-voting will be provided in the Notice convening the Meeting. Members attending the meeting through VC / OAVM shall be counted for the purpose of quorum in terms of Section 103 of the Companies Act, 2013.

Members are requested to contact their Depository Participant and register their email address and bank account details in their demat account as per the process of the respective Depository Participant.

Dividend Record Date

The Board of Directors at their meeting held on Tuesday, May 19, 2026, recommended dividend at the rate of ₹**5.00/-** per equity share having face value of ₹10/- each for the Financial Year ended March 31, 2026. The record date for the purpose of the dividend is **September 15, 2026.**

The dividend once declared by the shareholders in the 102nd AGM will be paid to those shareholders whose name appear in the Bank's Register of Members / Statement of Beneficial Position received from the NSDL and the CDSL as at the close of business hours on **September 15, 2026.** To avoid the delay in receiving dividend, Members are requested to update their KYC with their depositories; (where shares are held in dematerialized mode) and with the Registrar & Share Transfer Agent of the Bank (where shares are held in physical mode) to receive dividend directly to their bank account. All future dividend payments shall be made only through electronic mode of payment approved by the Reserve Bank of India and the Bank will not be paying dividend(s) through physical mode i.e., 'Dividend Warrants'.

Members may note that the Income Tax Act 2025, ("the IT Act") mandates that dividends paid or distributed by the Company shall be taxable in the hands of Members. The Bank shall therefore be required to deduct tax at source ("TDS") at the time of making the payment of the final dividend. To enable us to determine the appropriate TDS rate as applicable, Members are requested to submit relevant documents in accordance with the provisions of the IT Act on or before **September 17, 2026.** In this regard, a separate email is being sent to the Members whose email address is registered with the depositories and also to the physical shareholders who have registered their e-mail addresses explaining the process of withholding of tax at prescribed rates on dividend being paid to the Members. For more information, members may contact Registrar & Share Transfer Agent of the Bank, Integrated Registry Management Services Private Limited, Unit: The Karnataka Bank Limited, No. 30, Ramana Residency, 4th Cross, Sampige Road, Malleshwaram, Bengaluru-560003, Fax: (080) 23460819, Email: irg@integratedindia.in or call Tel: (080) 23460815-818.

By the Order of the Board of Directors
For The Karnataka Bank Limited
Sd/-
Sham K
Company Secretary

Place : Mangaluru
Date : 31.08.2026

ಕರ್ಣಾಟಕ ಬ್ಯಾಂಕ್ ಲಿ.

ನಿಮ್ಮ ಕುಟುಂಬದ ಬ್ಯಾಂಕ್. ಭಾರತದಾದ್ಯಂತ.

(ನೋಂದಾಯಿತ ಮತ್ತು ಪ್ರಧಾನ ಕಚೇರಿ: ಮಹಾವೀರ ವೃತ್ತ, ಕಂಕನಾಡಿ, ಮಂಗಳೂರು-575 002)

ಕಂಪನಿ ಗುರುತು ಸಂಖ್ಯೆ : L85110KA1924PLC001128 ಇ-ಮೇಲ್ : investor.grievance@ktk.bank.in

ಕಂಪನಿ ಜಾಲತಾಣ : www.karnatakabank.bank.in ಫೋನ್ ನಂ. : 0824-2228222

102ನೇ ವಾರ್ಷಿಕ ಮಹಾಸಭೆ (AGM) ಯನ್ನು ವಿದ್ಯುನ್ಮಾನ ಮಾಧ್ಯಮದ (VC/OAVM) ಮೂಲಕ ನಡೆಸುವ ಕುರಿತು

ಕರ್ಣಾಟಕ ಬ್ಯಾಂಕ್ ಲಿಮಿಟೆಡ್‌ನ ಸದಸ್ಯರ **102 ನೇ ವಾರ್ಷಿಕ ಮಹಾಸಭೆಯನ್ನು (AGM) ಸೆಪ್ಟೆಂಬರ್ 22, 2026 ರಂದು ಮಂಗಳವಾರ ಬೆಳಗ್ಗೆ 11.00ಕ್ಕೆ** ನಡೆಸಲಾಗುವುದು ಎಂದು ಈ ಪ್ರಕಟಣೆಯ ಮೂಲಕ ತಿಳಿಸಲಾಗಿದೆ. ಸೆಬಿ (ಪಟ್ಟಿ ಮಾಡುವಿಕೆಯ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅವಶ್ಯಕತೆಗಳು) ನಿಯಮಾವಳಿಗಳು, 2015 ಮತ್ತು ಕಂಪನಿಗಳ ಕಾಯಿದೆ, 2013 ಹಾಗೂ ಅದರ ಅಡಿಯಲ್ಲಿ ರೂಪಿಸಲಾದ ನಿಯಮಗಳ ಅನ್ವಯವಾಗುವ ನಿಬಂಧನೆಗಳಿಗೆ ಅನುಗುಣವಾಗಿ; ಜೊತೆಗೆ ಸೆಪ್ಟೆಂಬರ್ 22, 2025 ರ ಸಾಮಾನ್ಯ ಸುತ್ತೋಲೆ ಸಂಖ್ಯೆ 03/2025 ಮತ್ತು ಅಕ್ಟೋಬರ್ 03, 2024 ರ ಸೆಬಿ ಸುತ್ತೋಲೆಯನ್ನು ಪರಿಗಣಿಸಿ, ಸಾಮಾನ್ಯ ಸ್ಥಳವೊಂದರಲ್ಲಿ ಸದಸ್ಯರ ಭೌತಿಕ ಉಪಸ್ಥಿತಿಯಿಲ್ಲದೆ ವಾರ್ಷಿಕ ಸಾಮಾನ್ಯ ಸಭೆಯನ್ನು (AGM) ವೀಡಿಯೊ ಕಾನ್ಫರೆನ್ಸಿಂಗ್ (VC) / ಇತರೆ ಆಡಿಯೋ ವಿಷುಯಲ್ ಸೌಲಭ್ಯಗಳ (OAVM) ಮೂಲಕ ಸಾಮಾನ್ಯ ಮತ್ತು ವಿಶೇಷ ವ್ಯವಹಾರವನ್ನು ವಹಿವಾಟು ಮಾಡಲು, ವಾರ್ಷಿಕ ಮಹಾಸಭೆಯನ್ನು ನಡೆಸುವ ಸಂಬಂಧ ಈ ಸೂಚನೆಯನ್ನು ಪ್ರಕಟಿಸಲಾಗಿದೆ.

ಡಿಪಾಸಿಟರಿ ಪಾರ್ಟಿಸಿಪೆಂಟ್/ ರಿಜಿಸ್ಟ್ರಾರ್ ಮತ್ತು ಷೇರ್ ಟ್ರಾನ್ಸ್‌ಫರ್ ಏಜೆಂಟ್ (RTA) ನಲ್ಲಿ ತಮ್ಮ ಇ-ಮೇಲ್ ವಿಳಾಸಗಳನ್ನು ನೋಂದಾಯಿಸಿದ ಸದಸ್ಯರಿಗೆ ವಾರ್ಷಿಕ ವರದಿಯೊಂದಿಗೆ 102 ನೇ ವಾರ್ಷಿಕ ಮಹಾಸಭೆಯ ಸೂಚನೆಯನ್ನು ಎಲೆಕ್ಟ್ರಾನಿಕ್ ವಿಧಾನ ಮೂಲಕ ಸರಿಯಾದ ಸಮಯದಲ್ಲಿ ಕಳುಹಿಸಲಾಗುತ್ತದೆ. 2025-26ನೇ ಹಣಕಾಸು ವರ್ಷದ 102ನೇ ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕ ವರದಿಯ ಸೂಚನೆಯನ್ನು ಬ್ಯಾಂಕಿನ ವೆಬ್‌ಸೈಟ್: **https://karnatakabank.bank.in/investors** ನಲ್ಲಿ ಮತ್ತು ಸಿಡಿಎಸ್‌ಎಲ್(CDSL) ವೆಬ್‌ಸೈಟ್ **www.evotingindia.com**ನಲ್ಲಿ ಲಭ್ಯವಾಗುವಂತೆ ಮಾಡಲಾಗುತ್ತದೆ. ಹೆಚ್ಚುವರಿಯಾಗಿ, ವಾರ್ಷಿಕ ಮಹಾಸಭೆ ಮತ್ತು ವಾರ್ಷಿಕ ವರದಿಯ ಸೂಚನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್‌ನಲ್ಲೂ ಲಭ್ಯವಿರುತ್ತದೆ. ಅಂದರೆ, ಬಿಎಸ್‌ಇ ಲಿಮಿಟೆಡ್ (BSE Ltd) ಮತ್ತು ನ್ಯಾಷನಲ್ ಸ್ಟಾಕ್ ಎಕ್ಸ್‌ಚೇಂಜ್ ಆಫ್ ಇಂಡಿಯಾ ಲಿಮಿಟೆಡ್ (NSE) ನಲ್ಲಿ ಕ್ರಮವಾಗಿ **www.bseindia.com** ಮತ್ತು **www.nseindia.com** ಗಳಲ್ಲಿ ಲಭ್ಯವಿರುತ್ತದೆ.

ಸದಸ್ಯರು ಈ ಸೌಲಭ್ಯದ ಮೂಲಕ ಮಾತ್ರ 102ನೇ ವಾರ್ಷಿಕ ಮಹಾಸಭೆಯಲ್ಲಿ ಹಾಜರಿರಬಹುದು ಮತ್ತು ಭಾಗವಹಿಸಬಹುದು. ಬ್ಯಾಂಕ್ ತನ್ನ ಎಲ್ಲಾ ಸದಸ್ಯರಿಗೆ ವಾರ್ಷಿಕ ಮಹಾಸಭೆಯ ನೋಟೀಸ್‌ನಲ್ಲಿ ನಿಗದಿಪಡಿಸಿದ ನಿರ್ಣಯಗಳ ಮೇಲೆ ವಾರ್ಷಿಕ ಮಹಾಸಭೆಯ ದಿನಾಂಕದ ಮೊದಲು ಮತ ಚಲಾಯಿಸಲು ರಿಮೋಟ್ ಇ-ವೋಟಿಂಗ್ ಸೌಲಭ್ಯವನ್ನು ಒದಗಿಸುತ್ತದೆ ಮತ್ತು ವಾರ್ಷಿಕ ಮಹಾಸಭೆಯ ಸಮಯದಲ್ಲಿ ಇ-ಮತದಾನದ ಸೌಲಭ್ಯವನ್ನು ನೀಡುತ್ತದೆ. ಭಾಗವಹಿಸುವಿಕೆ ಮತ್ತು ಇ-ಮತದಾನಕ್ಕೆ ಸಂಬಂಧಿಸಿದಂತೆ ವಿವರವಾದ ಸೂಚನೆಗಳು / ವಿಧಾನಗಳನ್ನು ಸಭೆಯ ಸೂಚನೆಯಲ್ಲಿ ಒದಗಿಸಲಾಗುತ್ತದೆ. ಈ ಮೂಲಕ ಸಭೆಗೆ ಹಾಜರಾಗುವ ಸದಸ್ಯರನ್ನು ಕಂಪನಿಗಳ ಕಾಯಿದೆ, 2013 ರ ಸೆಕ್ಷನ್ 103 ರ ಪ್ರಕಾರ ಕೋರಂ ಉದ್ದೇಶಕ್ಕಾಗಿ ಪರಿಗಣಿಸಲಾಗುತ್ತದೆ.

ಸದಸ್ಯರು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಅವರನ್ನು ಸಂಪರ್ಕಿಸುವಂತೆ ವಿನಂತಿಸಲಾಗಿದೆ ಮತ್ತು ತಮ್ಮ ಡಿಪಾಸಿಟರಿ ಪಾರ್ಟಿಸಿಪೆಂಟ್ ಪ್ರಕ್ರಿಯೆಯ ಪ್ರಕಾರ ತಮ್ಮ ಇಮೇಲ್ ವಿಳಾಸ ಮತ್ತು ಬ್ಯಾಂಕ್ ಖಾತೆ ವಿವರಗಳನ್ನು ತಮ್ಮ ಡಿಮ್ಯಾಟ್ ಖಾತೆಯಲ್ಲಿ ನೋಂದಾಯಿಸುವಂತೆ ಕೋರಲಾಗಿದೆ.

ಡಿವಿಡೆಂಡ್ (ಲಾಭಾಂಶ) ದಾಖಲೆ ದಿನಾಂಕ

ನಿರ್ದೇಶಕರ ಮಂಡಳಿಯು ಮೇ 19, 2026 ರ ಮಂಗಳವಾರದಂದು ನಡೆದ ತಮ್ಮ ಸಭೆಯಲ್ಲಿ ₹10/- ಮುಖಬೆಲೆಯನ್ನು ಹೊಂದಿರುವ ಪ್ರತಿ ಈಕ್ವಿಟಿ ಷೇರಿಗೆ ಮಾರ್ಚ್ 31, 2026 ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ ತಲಾ ₹5/- (ಮುಖಬೆಲೆಯ 50%) ದರದಲ್ಲಿ ಲಾಭಾಂಶ ನೀಡಲು ಶಿಫಾರಸು ಮಾಡಿದೆ. ಲಾಭಾಂಶ ವಿತರಣೆಯ ಉದ್ದೇಶಕ್ಕಾಗಿ **ಸೆಪ್ಟೆಂಬರ್ 15, 2026ನ್ನು** ದಾಖಲೆ ದಿನಾಂಕ ಎಂದು ನಿರ್ಧರಿಸಲಾಗಿದೆ. 102 ನೇ ವಾರ್ಷಿಕ ಮಹಾಸಭೆಯಲ್ಲಿ ಷೇರುದಾರರು ಒಮ್ಮೆ ಅನುಮೋದಿಸಿದ ಲಾಭಾಂಶವನ್ನು **ಸೆಪ್ಟೆಂಬರ್ 15, 2026 ರಂದು** ವ್ಯವಹಾರದ ಸಮಯದ ಮುಕ್ತಾಯದ ವೇಳೆಗೆ NSDL ಮತ್ತು CDSL ನಿಂದ ಬ್ಯಾಂಕಿನ ಸದಸ್ಯರ ನೋಂದಣಿ ರಿಜಿಸ್ಟ್ರಿಯಲ್ಲಿ ಹೆಸರು ಕಾಣಿಸಿರುವ ಷೇರುದಾರರಿಗೆ ಪಾವತಿಸಲಾಗುತ್ತದೆ. ಲಾಭಾಂಶವನ್ನು ಪಡೆಯುವಲ್ಲಿ ವಿಳಂಬವನ್ನು ತಪ್ಪಿಸಲು ಮತ್ತು ನೇರವಾಗಿ ತಮ್ಮ ಬ್ಯಾಂಕ್ ಖಾತೆಗೆ ಲಾಭಾಂಶವನ್ನು ಸ್ವೀಕರಿಸಲು ಸದಸ್ಯರು ಡಿಪಾಸಿಟರಿ ಪಾರ್ಟಿಸಿಪೆಂಟ್‌ನೊಂದಿಗೆ (ಡಿಮೆಟಿರಿಯಲೈಸ್ಡ್ ಮೋಡ್‌ನಲ್ಲಿರುವ ಷೇರುಗಳು) ಮತ್ತು RTA ನೊಂದಿಗೆ (ಭೌತಿಕ ಮೋಡ್‌ನಲ್ಲಿ ಇರಿಸಿದ ಷೇರುಗಳು) ತಮ್ಮ KYC ಅನ್ನು ನವೀಕರಿಸುವಂತೆ ವಿನಂತಿಸಲಾಗಿದೆ. SEBI (ಪಟ್ಟಿ ಮಾಡುವ ಬಾಧ್ಯತೆಗಳು ಮತ್ತು ಬಹಿರಂಗಪಡಿಸುವಿಕೆಯ ಅಗತ್ಯತೆಗಳು) 2015ರ ನಿಯಮಗಳ ತಿದ್ದುಪಡಿಯ ಪ್ರಕಾರ, ನವೆಂಬರ್ 18, 2025 ರಿಂದ ಭೌತಿಕ ಡಿವಿಡೆಂಡ್ ವಾರಂಟ್‌ಗಳ ವಿತರಣೆಯನ್ನು ಸ್ಥಗಿತಗೊಳಿಸಲಾಗಿದೆ.

ಆದಾಯ ತೆರಿಗೆ ಕಾಯಿದೆ 2025, (ಐಟಿ ಕಾಯಿದೆ) ಪ್ರಕಾರ, ಕಂಪನಿಯು ಪಾವತಿಸಿದ ಅಥವಾ ವಿತರಿಸಿದ ಲಾಭಾಂಶದಲ್ಲಿ ಸದಸ್ಯರ ಕೈಯಲ್ಲಿರುವ ಮೊತ್ತಕ್ಕೆ ತೆರಿಗೆ ವಿಧಿಸಲಾಗುತ್ತದೆ ಎಂಬುದನ್ನು ಸದಸ್ಯರು ಗಮನಿಸಬೇಕು. ಆದ್ದರಿಂದ ಅಂತಿಮ ಲಾಭಾಂಶವನ್ನು ಪಾವತಿಸುವ ಸಮಯದಲ್ಲಿ ಬ್ಯಾಂಕ್ ಮೂಲದಲ್ಲಿ ತೆರಿಗೆ ಕಡಿತ (TDS) ಮಾಡಬೇಕಾಗುತ್ತದೆ. ಅನ್ವಯವಾಗುವ ಸೂಕ್ತವಾದ ದರವನ್ನು ನಿರ್ಧರಿಸಲು ನಮಗೆ ಅನುವು ಮಾಡಿಕೊಡಲು, **ಸೆಪ್ಟೆಂಬರ್ 17, 2026 ರಂದು** ಅಥವಾ ಮೊದಲು ಆದಾಯ ತೆರಿಗೆ ಕಾಯಿದೆಯ ನಿಬಂಧನೆಗಳಿಗೆ ಅನುಗುಣವಾಗಿ RTA ನೊಂದಿಗೆ ದಾಖಲೆಗಳನ್ನು ಸಲ್ಲಿಸುವಂತೆ ಸದಸ್ಯರಿಗೆ ವಿನಂತಿ ಮಾಡಲಾಗಿದೆ. ಈ ನಿಟ್ಟಿನಲ್ಲಿ, ಈಗಾಗಲೇ ಸದಸ್ಯರಿಗೆ ಪಾವತಿಸುವ ಲಾಭಾಂಶದ ಮೇಲೆ ನಿಗದಿತ ದರಗಳಲ್ಲಿ ತೆರಿಗೆಯನ್ನು ತಡೆಹಿಡಿಯುವ ಪ್ರಕ್ರಿಯೆಯನ್ನು ವಿವರಿಸುವ ಠೇವಣಿದಾರರ ನೋಂದಾಯಿತ ವಿಳಾಸಗಳಿಗೆ ಪ್ರತ್ಯೇಕ ಇಮೇಲ್ ಅನ್ನು ಕಳುಹಿಸಲಾಗುತ್ತದೆ. ಹೆಚ್ಚಿನ ಮಾಹಿತಿಗಾಗಿ, ಸದಸ್ಯರು ಬ್ಯಾಂಕ್‌ನ ರಿಜಿಸ್ಟ್ರಾರ್ ಮತ್ತು ಶೇರ್ ಟ್ರಾನ್ಸ್‌ಫರ್ ಏಜೆಂಟ್ ಅನ್ನು ಸಂಪರ್ಕಿಸಬಹುದು. ವಿಳಾಸ: ಇಂಟಿಗ್ರೇಟೆಡ್ ರಿಜಿಸ್ಟ್ರಿ ಮ್ಯಾನೇಜ್‌ಮೆಂಟ್ ಸರ್ವೀಸಸ್ ಪ್ರೈವೇಟ್ ಲಿಮಿಟೆಡ್, ವಿಭಾಗ: ದಿ ಕರ್ನಾಟಕ ಬ್ಯಾಂಕ್ ಲಿಮಿಟೆಡ್, ನಂ. 30, ರಮಣ ರೆಸಿಡೆನ್ಸಿ, 4ನೇ ಕ್ರಾಸ್, ಸಂಪಿಗೆ ರಸ್ತೆ, ಮಲ್ಲೇಶ್ವರಂ, ಬೆಂಗಳೂರು-560003, ಇಮೇಲ್: irg@integratedindia.in ಅಥವಾ ದೂರವಾಣಿ: (080) 23460815-818 ಗೆ ಕರೆ ಮಾಡಬಹುದು.

ನಿರ್ದೇಶಕರ ಮಂಡಳಿಯ ಆದೇಶದ ಮೇರೆಗೆ
ಕರ್ಣಾಟಕ ಬ್ಯಾಂಕ್ ಲಿಮಿಟೆಡ್ ಪರವಾಗಿ,
ಸಹಿ/-
ಶಾಮ್ ಕೆ.
ಕಂಪನಿ ಕಾರ್ಯದರ್ಶಿ

ಸ್ಥಳ : ಮಂಗಳೂರು
ದಿನಾಂಕ : 31.08.2026

QUICKLY.

India, Chile aim to conclude trade pact talks

New Delhi: India is committed to conclude negotiations for a comprehensive trade agreement with Chile this year as it would help further strengthen economic ties between the two countries, the Commerce Ministry said. Commerce Secretary Rajesh Agarwal was in Santiago, Chile to review the progress of the talks. The proposed comprehensive economic partnership agreement (CEPA) is expected to open new avenues for greater trade and investment.PTI

Keralam's MV Dept to add Aadhaar OTP check

Thiruvananthapuram: Keralam's Motor Vehicles Department will introduce Aadhaar-based OTP verification for 60 more services from September 21 to prevent middlemen from exploiting applicants, officials said. The services, available through the Vahan and Sarathi portals for vehicle and driving licence-related matters, respectively, will be brought online under the initiative. PTI

Gas-based power plants stabilised grid during nights in Apr-May: IGU

HEAT IS ON. Peak power demand reached a record 271 GW due to severe heat waves

Rishi Ranjan Kala
New Delhi

India's gas-based power plants helped provide grid stability during the peak electricity demand season in April and May 2026 as severe heat waves pushed up demand for cooling during evening and night hours.

India has 20 GW of gas-based power plants as of July 2026. The International Gas Union (IGU) noted that India provides a recent example of how heat waves can translate into higher gas demand.

In May 2026, peak power demand reached a record 271 GW as severe heat waves lifted cooling needs across the country.

During April and May, natural gas-based power plants increased natural gas purchases on the Indian Gas Exchange (IGX) by around 340 per cent y-o-y, reaching 124.3 million cubic meters (mcm), it pointed out.

GRID RESILIENCE. India has 20 gigawatts (GW) of gas-based power plants as of July 2026

"While solar helped meet daytime demand, natural gas-based plants provided flexible supply and supported grid stability during high demand evening and night hours when solar generation was unavailable. This shows how natural gas can provide short term flexibility when extreme heat pushes electricity demand above normal levels," the industry body emphasised.

It highlighted that cooling needs during periods of extreme heat are increasing the need for reliable and dispatchable power, particularly where grid capacity, renewable output or storage availability are constrained.

SYSTEM FLEXIBILITY

In this context, natural gas can support system flexibility by providing capacity during periods of high demand, supply disruption or lower renewable generation, IGU noted. Electricity demand growth is being driven by several factors including cooling, industrial activity, agriculture and broader economic growth. However, hotter seasonal conditions can add further pressures by increasing cooling needs.

For instance, in India, the monthly peak demand rose above historical ranges during the 2026 hot season, with the country staying above the 2020-2024 range in the first five months of the year. It reported daytime peak power demand of a record 270 GW during May and July, it added.

The industry body emphasised that higher maximum daily temperatures go hand in hand with rising air-conditioning ownership, supported by income growth, urbanisation and improving living standards.

"Peak demand during cooling seasons has become more sensitive to temperature as air-conditioner stock continues to grow. In India, each 1°C increase in outdoor temperature was associated with more than 7 GW of additional peak demand in 2024, up from around 4 GW in 2019," IGU said.

This points to a wider risk for fast growing Asian markets, where expanding cooling access can turn short periods of extreme heat into system wide demand spikes, it said.

PLANNING CHALLENGE

These developments point to a broader planning challenge. As air-conditioning use rises, higher temperatures can widen the gap between average electricity demand and peak demand. This shows that heatwave-driven demand growth is not only a short-term operational issue, but also a long-term capacity planning challenge, the industry body emphasised.

"Looking ahead, the risk could become more pronounced in 2026 if El Niño conditions develop as expected," the IGU said.

SEBI could have been better prepared for closing auction: Ex-chief UK Sinha

Akshata Gorde
Mumbai

Former SEBI Chairman UK Sinha

Former Securities and Exchange Board of India (SEBI) Chairman UK Sinha said the market regulator could have been better prepared before rolling out the closing auction session (CAS), as the new market mechanism faces concerns over liquidity and sharp price swings.

"Better preparation, consultation, and beta testing were needed, but I am not worried. My sense is that it will stabilise," Sinha told *businessline*. The closing auction mechanism, introduced on August 3 for stocks in the futures and options (F&O) segment, changed the way their official closing prices are determined. Continuous trading in these stocks now ends at 3.15 pm, followed by an auction process to arrive at the closing price.

The regulator had issued two consultation papers on the proposal before finalising the framework in January. However, the exchanges conducted a CAS-specific mock trading session only on August 1, two days before the mechanism went live.

TRADE OFF

The CAS has come under scrutiny since implementation due to sharp swings during the auction period, including on last Thursday's monthly derivatives expiry, when the Sensex saw an unusually large intra-session move during the closing process.

Market participants have raised concerns about liquidity and have written to the regulator with suggestions, including a rollback of the framework. Experts said similar vulnerabilities existed under the earlier VWAP methodology, although the auction mechanism makes such attempts at manipulation easier to identify.

"Perhaps there could have been wider preparation, but it will eventually stabilise. But if there is anybody trying to manipulate, their chances of getting caught are very high now," Sinha said, adding that an active securities lending and borrowing mechanism would've made the transition smoother.

Last week, SEBI also acted against entities for alleged manipulation in the cash market by placing large orders during the auction to benefit from their derivatives expiry positions.

INHERENT MISMATCH

The experience has also brought into focus the disconnect between the size of the derivatives market and the underlying cash market. Large derivatives positions are settled based on prices discovered in a cash market with relatively smaller trading volumes, risking market stability.

SEBI had taken a series of steps over the past two years to curb excessive speculation in the derivatives space, including changes to contract sizes and incentives for deepening cash market volumes. Sinha backed the regulator's approach, saying that trading in futures and options was inherently risky for individuals who may not fully understand leverage.

Domestic lines worried as govt lets foreign vessels in coastal trade

T E Raja Simhan
Chennai

India's shipping industry is set for continued competition from foreign-flagged vessels in coastal trade, with the Centre restoring the 2018 relaxations to ensure capacity for exporters and importers amid geopolitical disruptions.

The Shipping Ministry, through an order on August 10, has restored relaxations allowing foreign-flagged vessels to carry specified categories of cargo between Indian ports, opting for continuity amid geopolitical disruptions and capacity constraints in global shipping.

The Ministry's order of August has rescinded two orders issued in January reversing the 2018 relaxations that had provided foreign shipping lines a transition period to comply with the stricter cabotage regime.

LATEST ORDER

The Ministry said the withdrawal of the January and March orders till September was intended to provide policy stability and operational certainty to India's maritime trade and logistics sector at a time when geopolitical developments were disrupting global shipping.

Jagannarayan Padmanabhan, Senior Director and Global Head-Consulting, Crisil Intelligence, said the decision "essentially maintains continuity and *status quo*" for shippers and shipping companies and avoids another regulatory transition. For Indian-flagged

shipping companies, however, the decision means they will not get exclusive access to the eligible coastal cargo and will continue to compete with foreign carriers, he added. Maritime trade expert Rajesh Menon said retaining the arrangement was necessary to ensure adequate availability of ships for India's export-import trade.

"Since the geopolitical situation is grim, there should be availability of ships. Hence, the *status quo* of allowing foreign vessels in coastal trade needs to be maintained," he said.

A former official of the department wondered, "If after a thorough review involving stakeholders, it is determined by the competent authority that the 2018 orders have not served their intended purpose and have accordingly been withdrawn duly, it is a matter of public concern that the same orders that have been regarded as worthless by the Government's own elaborate review process, are sought to be given a fresh lease of life for no ostensible reason than vaguely stating it is for 'policy stability and operational certainty to safeguard India's maritime and logistics sectors'."

BKT to launch car tyres in Nov ; to double revenue to ₹23,000 cr by FY30

Amit Vijay Mohile
Mumbai

Balkrishna Industries (BKT), which closed FY26 with consolidated revenue of ₹10,823 crore and weaker profitability, has begun FY27 on a stronger footing and is betting on three growth engines, off-highway tyres, carbon black and its new on-road tyre business, to more than double revenue to ₹23,000 crore by FY30.

Q1 standalone revenue rose 25.2 per cent year-on-year and net profit jumped 56.4 per cent, while the company is targeting FY27 tyre volumes of 3.30-3.40 lakh tonnes. After the truck and two-wheeler tyre launch in April, BKT will roll out passenger-car tyres in November "We have a vision of ₹5,000 crore by 2030. So from zero to ₹5,000 crore is a journey that we have," Satish Sharma, Senior President & Director – Business Development and Strategy, Balkrishna Industries, told *businessline*.

BKT is targeting about 5 per cent of India's non-off-highway tyre market as it builds a domestic consumer business alongside its traditional export-heavy operations.

PRODUCT BASKET

The company has more than 3,600 products sold across 163 countries, with exports accounting for around 65 per cent of revenue. Its Bhuj plant produces about 70 per cent of exports, a share the company expects to increase to 80 per cent next year.

Moving into passenger cars and two-wheelers also requires BKT to build consumer recognition. It has revamped its brand architecture and stepped up marketing, including through its T20 cricket association. The company said brand recognition and awareness has risen 11 per cent.

CORE STILL HAS ROOM

The new on-road portfolio will be powertrain agnostic and EV-ready, allowing the same tyres to cater to ICE, CNG and electric vehicles.

A dedicated EV range could follow once the electric-vehicle population becomes large enough, Sharma said. BKT isn't relying on the new categories alone. Sharma expects its core off-highway business to grow significantly over the next four-five years despite tariff and geopolitical uncertainties in Europe and the US.

Carbon black, which BKT entered in 2019 largely for captive requirements, has also developed into a significant third-party business. "The vision of ₹23,000 crore that we have is a doable vision in our view," Sharma said. "The infrastructure has been put into place. The growth is now going to come." The immediate challenge is input costs. BKT has raised prices 9 per cent over the past four months, but Sharma said an 18-20 per cent increase would be needed to completely offset cost pressures.

PRICE RISE

"At least one more" price revision is on the cards this year, he said.

The squeeze was visible in FY26: EBITDA fell to ₹2,552 crore from ₹2,996 crore, while net profit declined to ₹1,243 crore from ₹1,655 crore, even as revenue grew.

India, Uzbekistan upgrade ties; target $5 billion trade by 2030

Press Trust of India
Tashkent

India and Uzbekistan on Sunday decided to elevate their ties to a comprehensive strategic partnership and set a target of $5 billion in annual trade by 2030, following talks between Prime Minister Narendra Modi and Uzbek President Shavkat Mirziyoyev. The two sides also agreed to establish a framework for long-term supply of uranium from Uzbekistan to India in line with cooperation in the civil-nuclear energy sector.

The Modi-Mirziyoyev talks focused on expanding cooperation in areas of trade, investment, infrastructure, critical minerals, mining, defence and security, agriculture, pharmaceuticals, health, information technology, digital public infrastructure, including UPI, and education. The two sides also set a target of $5 billion in annual bilateral trade by 2030, Modi said in his press statement.The current volume of bilateral trade between the two nations is over $1 billion. Both leaders announced the elevation of strategic ties to a Comprehensive Strategic Partnership – reflecting the growing depth and expanding scope of cooperation between India and Uzbekistan. They witnessed the exchange of several agreements, covering a wide range of areas.

ಸಂತ್ರಸ್ತ ಮಕ್ಕಳ ಕಣ್ಣೀರು ಕೇಳುವವರೇ ಇಲ್ಲ!

ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಗಳಲ್ಲಿ ಸದಸ್ಯರ ಕೊರತೆ

■ **ವೆಂ.ಸುನೀಲ್ ಕುಮಾರ್** ಕೋಲಾರ
sunil.kumar14@timesofindia.com

ಮಕ್ಕಳ ಹಕ್ಕುಗಳ ರಕ್ಷಣೆ ಹಾಗೂ ಸಂಕಷ್ಟದಲ್ಲಿರುವ ಮಕ್ಕಳಿಗೆ ತ್ವರಿತ ನ್ಯಾಯ ಮತ್ತು ಪುನರ್ವಸತಿ ಕಲ್ಪಿಸಬೇಕಾದ ಅತ್ಯುನ್ನತ ಸಂಸ್ಥೆಯಾಗಿರುವ 'ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿ'ಗಳು ಪ್ರಮುಖ ಸದಸ್ಯರ ಕೊರತೆಯಿಂದ ಸೊರಗಿವೆ. ಬಹುತೇಕ ಜಿಲ್ಲೆಗಳಲ್ಲಿ ಹುದ್ದೆಗಳು ಖಾಲಿ ಉಳಿದಿರುವುದರಿಂದ ಸಮಿತಿಯ ಕಾರ್ಯನಿರ್ವಹಣೆಗೆ ದೊಡ್ಡ ಮಟ್ಟದ ಹಿನ್ನಡೆಯಾಗಿದ್ದು, ನ್ಯಾಯಕ್ಕಾಗಿ ಅಲೆಯುತ್ತಿರುವ ಮಕ್ಕಳ ಹಾಗೂ ಪೋಷಕರ ಗೋಳು ಹೇಳತೀರದಾಗಿದೆ.

ಜುವೆನೈಲ್ ಜಸ್ಟೀಸ್ (ಮಕ್ಕಳ ಆರೈಕೆ ಮತ್ತು ರಕ್ಷಣೆ) ಕಾಯಿದೆಯ ಪ್ರಕಾರ, ಪ್ರತಿ ಜಿಲ್ಲೆಯ ಮಕ್ಕಳ ಕಲ್ಯಾಣ ಸಮಿತಿಯಲ್ಲಿ ಒಬ್ಬ ಅಧ್ಯಕ್ಷರು ಹಾಗೂ ನಾಲ್ವರು ಸದಸ್ಯರು ಸೇರಿದಂತೆ ಒಟ್ಟು ಐವರು ಸದಸ್ಯರು ಕಡ್ಡಾಯವಾಗಿ ಇರಬೇಕು. ಆದರೆ, ರಾಜ್ಯದ ಹಲವು ಜಿಲ್ಲೆಗಳಲ್ಲಿ ಪ್ರಸ್ತುತ ಅಧ್ಯಕ್ಷರೊಂದಿಗೆ ಕೇವಲ ಇಬ್ಬರು ಸದಸ್ಯರು ಮಾತ್ರವಿದ್ದು, ಎರಡು ಪ್ರಮುಖ ಹುದ್ದೆಗಳು ದೀರ್ಘಕಾಲದಿಂದ ಖಾಲಿ ಬಿದ್ದಿವೆ. ಮಕ್ಕಳ ಹಕ್ಕುಗಳ ನಿರ್ದೇಶನಾಲಯದ ಮಟ್ಟದಲ್ಲೇ ಕಾಯಿದೆ ಪಾಲನೆಯಾಗದಿರುವುದು ದೊಡ್ಡ ವಿಪರ್ಯಾಸ.

ಕೋರಂ ಸಂಕಷ್ಟ: ಮಕ್ಕಳ ಮೇಲಿನ ದೌರ್ಜನ್ಯ, ನಿರಾಶ್ರಿತ ಮಕ್ಕಳು, ಬಾಲ ಕಾರ್ಮಿಕರು, ಬಾಲ್ಯವಿವಾಹ, ಮಕ್ಕಳ ಕಳ್ಳಸಾಗಣೆ ಹಾಗೂ ಅನಾಥ ಮಕ್ಕಳ ಪ್ರಕರಣಗಳು ಪ್ರತಿದಿನ ಸಮಿತಿಯ ಮುಂದೆ ಬರುತ್ತವೆ. ನಿಯಮದ ಪ್ರಕಾರ ಸಮಿತಿಯ ಒಬ್ಬ ಸದಸ್ಯರು ಗೈರಾದರೂ 'ಕೋರಂ' (Corum) ಇಲ್ಲದ ಕಾರಣ ಕಲಾಪ ನಡೆಸಲು ಸಾಧ್ಯವಾಗುವುದಿಲ್ಲ. ಇದರಿಂದಾಗಿ ದೂರದ ಊರುಗಳಿಂದ ಬರುವ ಪೋಷಕರು ಮತ್ತು ಸಂಬಂಧಿಕರು ಸಮಿತಿಯ ಕಚೇರಿಗೆ ಪದೇ ಪದೇ ಅಲೆದಾಡುವ ದುಸ್ಥಿತಿ ನಿರ್ಮಾಣವಾಗಿದ್ದು, ವಿಚಾರಣೆ ಮತ್ತು ತೀರ್ಪುಗಳು ವಿಳಂಬವಾಗುತ್ತಿವೆ.

> ಖಾಲಿಯಿರುವ ಸದಸ್ಯರ ಭರ್ತಿಗೆ ಈಗಾಗಲೇ ಸರಕಾರದಿಂದ ಕ್ರಮಕೈಗೊಂಡಿದ್ದು, ಶೀಘ್ರವೇ ಅಧಿಸೂಚನೆ ಹೊರಡಿಸಿ ಖಾಲಿಯಿರುವ ಸದಸ್ಯರನ್ನು ನೇಮಿಸಿಕೊಳ್ಳಲು ಕ್ರಮಕೈಗೊಳ್ಳಲಾಗುವುದು.
> **-ಡಾ.ಶಮ್ಲಾ ಇಕ್ಬಾಲ್** ಕಾರ್ಯದರ್ಶಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಮಕ್ಕಳ ಹಿತಾಸಕ್ತಿಗೆ ತೀವ್ರ ಧಕ್ಕೆ: ಸಂಕಷ್ಟದಲ್ಲಿರುವ ಮಕ್ಕಳಿಗೆ ತ್ವರಿತ ಕಾನೂನು ಬದ್ಧ ರಕ್ಷಣೆ ಒದಗಿಸುವುದು ಈ ಸಮಿತಿಯ ಮೂಲ ಉದ್ದೇಶ. ಆದರೆ ಸದಸ್ಯರ ಕೊರತೆಯಿಂದಾಗಿ ಮಕ್ಕಳ ಹಿತಾಸಕ್ತಿ ಮಣ್ಣುಪಾಲಾಗಿದೆ. ಮಕ್ಕಳನ್ನು ಸರಕಾರಿ ಅಥವಾ ಖಾಸಗಿ ಆರೈಕೆ ಕೇಂದ್ರಗಳಿಗೆ ದಾಖಲಿಸುವುದು, ಕುಟುಂಬದೊಂದಿಗೆ ಪುನರ್ಮಿಲನ ಮತ್ತು ದತ್ತು ಪ್ರಕ್ರಿಯೆಗಳು ನಡೆಯುತ್ತಿಲ್ಲ, ಇದರಿಂದ ಸಮಗ್ರ ಪುನರ್ವಸತಿ ಕ್ರಮಗಳು ವಿಳಂಬಗೊಂಡು, ಇದು ಮಕ್ಕಳ ಭವಿಷ್ಯದ ಮೇಲೆಯೇ ದುಷ್ಪರಿಣಾಮ ಬೀರುತ್ತಿದೆ ಎಂದು ಮಕ್ಕಳ ತಜ್ಞರು ಕಳವಳ ವ್ಯಕ್ತಪಡಿಸಿದ್ದಾರೆ.

ಈ ಕುರಿತು ಪ್ರತಿಕ್ರಿಯಿಸಿರುವ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಡಾ. ಶಮ್ಲಾ ಇಕ್ಬಾಲ್, ''ಖಾಲಿಯಿರುವ ಸದಸ್ಯರ ಹುದ್ದೆಗಳನ್ನು ಭರ್ತಿ ಮಾಡಲು ಈಗಾಗಲೇ ಸರಕಾರದಿಂದ ಅಗತ್ಯ ಕ್ರಮಕೈಗೊಳ್ಳಲಾಗಿದೆ. ಶೀಘ್ರದಲ್ಲೇ ಅಧಿಕೃತ ಅಧಿಸೂಚನೆ ಹೊರಡಿಸಿ ಸಮಿತಿಗೆ ಹೊಸ ಸದಸ್ಯರನ್ನು ನೇಮಕ ಮಾಡಿಕೊಳ್ಳಲಾಗುವುದು,'' ಎಂದು ತಿಳಿಸಿದ್ದಾರೆ.

ಗವರ್ನಮೆಂಟ್ ಸ್ಕೂಲ್ ಎಂದರೆ ಮೂಗು ಮುರಿಯುವವರಿಗೆ ಇಲ್ಲಿದೆ ಕಣ್ಣು ತೆರೆಸುವ ಕಥೆ !

4 ವರ್ಷಗಳಲ್ಲಿ 200ರಿಂದ 420ಕ್ಕೇರಿದ ದಾಖಲಾತಿ| ಪಿಎಂಶ್ರೀ ನೆರವಿನಿಂದ ಅಕ್ಷರ ಅಂಗಳ ಹೈಟೆಕ್

ಶಿಕ್ಷಕಿಯ ಇಚ್ಛಾಶಕ್ತಿ, ಮಿಂಚಿದ ಸರಕಾರಿ ಶಾಲೆ !

■ **ಇ.ಎಚ್. ಬಸವರಾಜ್** ಶಿಕಾರಿಪುರ (ಶಿವಮೊಗ್ಗ)
basavarajskprnews@gmail.com

'ಪಾಠ ಮಾಡುವುದು ಮಾತ್ರ ನಮ್ಮ ಕರ್ತವ್ಯವಲ್ಲ, ಶಾಲೆಯ ಸಮಗ್ರ ಅಭಿವೃದ್ಧಿ ನಮ್ಮ ಹೊಣೆ' ಎಂಬ ಧ್ಯೇಯವನ್ನಿಟ್ಟುಕೊಂಡು, ಸರಕಾರಿ ಶಾಲೆಯೊಂದರ ಚಿತ್ರಣವನ್ನೇ ಬದಲಾಯಿಸಿ ತೋರಿಸಿದ್ದಾರೆ ಇಲ್ಲೊಬ್ಬರು ಶಿಕ್ಷಕಿ.

ಶಿಕ್ಷಕಿ ಕೆ.ಪಿ. ಕವಿತಾ ಅವರ ದಿಟ್ಟ ಹೆಜ್ಜೆಗಳು ಮತ್ತು ಊರ ಜನರ ಸಹಕಾರದಿಂದ ಶಿವಮೊಗ್ಗ ಜಿಲ್ಲೆ ಶಿಕಾರಿಪುರದ 'ಧನರಾಜ್ ಹೇಮರಾಜ್ ಸರಕಾರಿ ಪ್ರಾಥಮಿಕ ಶಾಲೆ' ಇಂದು ರಾಜ್ಯದ ಸರಕಾರಿ ಶಾಲೆಗಳಿಗೆ ಮಾದರಿಯಾಗಿ ಹೊರಹೊಮ್ಮಿದೆ. ಕೇವಲ ನಾಲ್ಕು ವರ್ಷಗಳ ಹಿಂದೆ 200 ವಿದ್ಯಾರ್ಥಿಗಳು ಮಾತ್ರವಿದ್ದ ಈ ಶಾಲೆಯಲ್ಲಿ, ಈಗ ಮಕ್ಕಳ ಸಂಖ್ಯೆ 420ಕ್ಕೆ ಏರಿಕೆಯಾಗಿದೆ. ಪ್ರಸ್ತುತ ಪರಿಸ್ಥಿತಿಯಲ್ಲಿ ಮಕ್ಕಳ ದಾಖಲಾತಿಗಾಗಿ ಪೋಷಕರು ಸರತಿ ಸಾಲಿನಲ್ಲಿ ನಿಲ್ಲುವ ಮಟ್ಟಿಗೆ ಶಾಲೆ ಹೆಸರು ಮಾಡಿದೆ.

ಪಟ್ಟಣದ ಹೃದಯಭಾಗದಲ್ಲಿರುವ ಧನರಾಜ್ ಹೇಮರಾಜ್ ಶಾಲೆಯನ್ನು 1969ರಲ್ಲಿ ಅಂದಿನ ಮೈಸೂರು ರಾಜ್ಯದ ಮುಖ್ಯಮಂತ್ರಿ ವೀರೇಂದ್ರ ಪಾಟೀಲ್ ಅವರು ಉದ್ಘಾಟಿಸಿದ್ದರು. ಅಕಾಲಿಕವಾಗಿ ಮೃತಪಟ್ಟ ತಮ್ಮ ಪುತ್ರನ ಸ್ಮರಣಾರ್ಥ ಪಟ್ಟಣದ ಉದ್ಯಮಿಯೊಬ್ಬರು ಈ ಶಾಲೆಯನ್ನು ನಿರ್ಮಿಸಿಕೊಟ್ಟಿದ್ದರು.

ಆಧುನಿಕ ಶಿಕ್ಷಣದ ಸ್ಪರ್ಶ: 1ರಿಂದ 7ನೇ ತರಗತಿವರೆಗೆ ಕನ್ನಡ ಹಾಗೂ ಇಂಗ್ಲಿಷ್ ಮಾಧ್ಯಮದಲ್ಲಿ ಬೋಧನೆ ನಡೆಯುತ್ತಿದ್ದು, ಕಳೆದ ಮೂರು ವರ್ಷಗಳಿಂದ ಎಲ್‌ಕೆಜಿ ಹಾಗೂ ಯುಕೆಜಿ ತರಗತಿಗಳನ್ನೂ ಯಶಸ್ವಿಯಾಗಿ ಆರಂಭಿಸಲಾಗಿದೆ. ಎಸ್‌ಡಿಎಂಸಿ ಹಾಗೂ ದಾನಿಗಳ ಸಹಕಾರದಿಂದ ಸುಮಾರು 6.5 ಲಕ್ಷ ರೂ. ವೆಚ್ಚದಲ್ಲಿ ಕಂಪ್ಯೂಟರ್‌ಗಳನ್ನು ತಂದು ಸ್ಮಾರ್ಟ್ ಕ್ಲಾಸ್‌ಗಳನ್ನು ನಡೆಸಲಾಗುತ್ತಿದೆ. ಜೊತೆಗೆ 4.5 ಲಕ್ಷ ರೂ. ವೆಚ್ಚದಲ್ಲಿ ಸುಂದರವಾದ ಊಟದ ಹಾಲ್ ನಿರ್ಮಿಸಲಾಗಿದೆ.

ಕೇಂದ್ರ ಸರಕಾರದ ಮಹತ್ವಾಕಾಂಕ್ಷೆಯ ಪಿಎಂಶ್ರೀ ಯೋಜನೆಗೆ ಆಯ್ಕೆಯಾಗಿರುವ ಈ ಶಾಲೆಗೆ ಪ್ರತಿವರ್ಷ ಅಂದಾಜು 50 ಲಕ್ಷ ರೂ. ಅನುದಾನ ಲಭಿಸುತ್ತಿದೆ. ಇದರಡಿ ಕ್ರೀಡಾ ಸಾಮಗ್ರಿಗಳು, ಸಂಗೀತ ಉಪಕರಣಗಳು, ಇಕೋ ಕ್ಲಬ್, ನೃತ್ಯ ತರಬೇತಿ ಮತ್ತು ಶೈಕ್ಷಣಿಕ ಪ್ರವಾಸಗಳನ್ನು ಆಯೋಜಿಸಲಾಗುತ್ತಿದೆ.

ಗೋಡೆಗಳ ಮೇಲೂ ಅರಳಿದೆ ಜ್ಞಾನ !

ಶಾಲೆಯ ಒಳಗೆ ಕಾಲಿಟ್ಟರೆ ಕೇವಲ ಪಾಠದ ಕೋಣೆಗಳಷ್ಟೇ ಅಲ್ಲ, ಶಾಲೆಯ ಗೋಡೆಗಳ ಮೇಲೆ ಕರ್ನಾಟಕದ ಖ್ಯಾತ ಸಾಹಿತಿಗಳ ಆಕರ್ಷಕ ಚಿತ್ರಗಳು ಹಾಗೂ ಅವರ ಪರಿಚಯಾತ್ಮಕ ಮಾಹಿತಿಯನ್ನು ಮೂಡಿಸಲಾಗಿದೆ. ಯೋಗ, ಸಂಗೀತ ಮತ್ತು ಕಂಪ್ಯೂಟರ್ ಕಲಿಕೆಗೆ ಪ್ರತ್ಯೇಕ ಶಿಕ್ಷಕರನ್ನು ನಿಯೋಜಿಸಲಾಗಿದೆ. ಇಚ್ಛಾಶಕ್ತಿ ಇದ್ದರೆ ಸರಕಾರಿ ಶಾಲೆಗಳನ್ನು ಹೇಗೆ ಮಾದರಿಯಾಗಿ ಕಟ್ಟಬಹುದು ಎಂಬುದಕ್ಕೆ ಶಿಕಾರಿಪುರದ ಧನರಾಜ್ ಹೇಮರಾಜ್ ಶಾಲೆ ಒಂದು ಜೀವಂತ ಸಾಕ್ಷಿಯಾಗಿದೆ.

> ಶಾಲೆಗೆ ಶಿಕ್ಷಕಿಯಾಗಿ ಬಂದ ಸಂದರ್ಭದಲ್ಲಿ ಶಾಲೆಯ ಅಭಿವೃದ್ಧಿ ಕುರಿತು ಚಿಂತನೆ ನಡೆಸಿದೆ. ವಿವಿಧ ಸಂಘ-ಸಂಸ್ಥೆಗಳು, ಎಸ್‌ಡಿಎಂಸಿ ಸಮಿತಿ ಹಾಗೂ ದಾನಿಗಳ ಸಹಕಾರದಿಂದ ಶಾಲೆಗೆ ಹೊಸ ರೂಪ ನೀಡಿದ್ದೇವೆ. ಪಿಎಂಶ್ರೀ ಅನುದಾನವನ್ನು ಮಕ್ಕಳ ವಿದ್ಯಾಭ್ಯಾಸಕ್ಕೆ ಸಂಪೂರ್ಣವಾಗಿ ಸದುಪಯೋಗಪಡಿಸಿಕೊಳ್ಳುತ್ತಿರುವುದು ಆತ್ಮಸಂತೋಷ ತಂದಿದೆ.
> **-ಕೆ.ಪಿ. ಕವಿತಾ** ಪ್ರಭಾರ ಮುಖ್ಯ ಶಿಕ್ಷಕಿ

> ಪಿಎಂಶ್ರೀ ಯೋಜನೆಯಡಿ ಸಿಗುತ್ತಿರುವ ಅನುದಾನವನ್ನು ಅತ್ಯಂತ ಸಮರ್ಥವಾಗಿ ಬಳಸಿ, ಹೊಸ ಕಟ್ಟಡ ನಿರ್ಮಿಸಿ ಗ್ರಂಥಾಲಯ ಆರಂಭಿಸುವಲ್ಲಿ ಮುಖ್ಯಶಿಕ್ಷಕಿ ಕವಿತಾ ಹಾಗೂ ಎಸ್‌ಡಿಎಂಸಿ ಅಧ್ಯಕ್ಷ ಸುಬ್ರಹ್ಮಣ್ಯ ರೇವಣಕರ್ ಶ್ರಮ ದೊಡ್ಡದಿದೆ.
> **ಕೆ.ಬಿ. ಲೋಕೇಶಪ್ಪ** ಕ್ಷೇತ್ರ ಶಿಕ್ಷಣಾಧಿಕಾರಿ

ಮೀಟ್ ಪ್ರಾಕ್ಸಿ

ವಿಕ ಜಾಣ ತಾಣ

MEAT PROXY

ವಾಟ್ಸ್ಯಾಪ್‌ನಲ್ಲಿ ಬಂದಿದ್ದನ್ನೆಲ್ಲಾ ನಂಬುವ, ಹಿಂದೆ-ಮುಂದೆ ನೋಡದೆ ಫಾರ್ವರ್ಡ್ ಮಾಡುವ ವ್ಯಕ್ತಿಗಳಿಗೆ ವಾಟ್ಸ್ಯಾಪ್ ಯೂನಿವರ್ಸಿಟಿಯ ವಿದ್ಯಾರ್ಥಿಗಳು ಎನ್ನಲಾಗುತ್ತಿತ್ತು. ಸಮಯ ಬದಲಾಗಿದೆ. ಈಗ ಸಣ್ಣಸಣ್ಣ ಸಂಶಯಗಳನ್ನೂ ಎಐಯಲ್ಲಿ ಕೇಳುವ ಯುಗ. ಹಾಗೆ ಕೇಳಿದ್ದಕ್ಕೆ ಎಐ ಕೊಟ್ಟ ಉತ್ತರವನ್ನು ಕಣ್ಣುಮುಚ್ಚಿ ನಂಬುವಂತಹ ಕಲಿಯುಗ! ಹಾಗಾಗಿ, ವಾಟ್ಸ್ಯಾಪ್ ಯೂನಿವರ್ಸಿಟಿಯ ಜಾಗಕ್ಕೆ ಇಂದು 'ಮೀಟ್ ಪ್ರಾಕ್ಸಿ' (Meat Proxy)ಎಂಬ ಹೊಸ ಪದ ಬಂದು ಕೂತಿದೆ. ಎಐ ಸೃಷ್ಟಿಸಿದ ಮಾಹಿತಿ, ಚಿತ್ರ, ಕೋಡ್ ಅಥವಾ ವಿಡಿಯೊಗಳನ್ನು ಪೂರ್ತಿಯಾಗಿ ಓದದೆ, ನೋಡದೆ ಇತರರಿಗೆ ಕಳುಹಿಸುವ ಹಾಗೂ ಕಾಪಿ ಪೇಸ್ಟ್ ಮಾಡುವ ವ್ಯಕ್ತಿಗಳಿಗೆ 'ಮೀಟ್ ಪ್ರಾಕ್ಸಿ' ಎನ್ನಲಾಗುತ್ತದೆ. ಮೀಟ್ ಪ್ರಾಕ್ಸಿಗಳು ಕಾಪಿ-ಪೇಸ್ಟ್ ಮಾಡುವುದು ಬಿಟ್ಟರೆ ಬೇರೆ ಯಾವ ಕೆಲಸವನ್ನೂ ಮಾಡುವುದಿಲ್ಲ, ಕನಿಷ್ಠ ತಾನು ಕಾಪಿ ಪೇಸ್ಟ್ ಮಾಡುವ ಕಂಟೆಂಟ್‌ನಲ್ಲಿ ಏನಿದೆ ಅನ್ನುವುದನ್ನು ತಿಳಿದುಕೊಳ್ಳುವುದಕ್ಕೂ ಮುಂದಾಗುವುದಿಲ್ಲ, ಇಂಥ ವ್ಯಕ್ತಿಗಳಿಂದ ಬೇಸತ್ತು ಈ ಪದವನ್ನು ಪರಿಚಯಿಸಿದ್ದು, ಸಾಫ್ಟ್‌ವೇರ್ ಎಂಜಿನಿಯರ್ ನಿಕ್ಲಾಸ್ ಗ್ರೂನ್. ನೀವು ಎಐಯನ್ನು ಎಷ್ಟಾದರೂ ಬಳಸಿ, ಆದರೆ ಅದನ್ನು ಇತರರಿಗೆ ಕಳುಹಿಸುವ ಮುನ್ನ ನೀವೇ ಸ್ವತಃ ಓದಿ, ಅರ್ಥೈಸಿಕೊಳ್ಳಿ ಎಂಬುದು ಇದರ ಹಿಂದಿರುವ ಮುಖ್ಯ ಸಂದೇಶ.

ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಅರ್ಜಿ ಆಹ್ವಾನ

ಬೆಂಗಳೂರು: 2026ನೇ ಸಾಲಿನ ಮಹಾತ್ಮ ಗಾಂಧಿ ಸೇವಾ ಪ್ರಶಸ್ತಿಗೆ ಅರ್ಹ ಸಾಧಕರು ಹಾಗೂ ಸಂಘ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಸಾರ್ವಜನಿಕ ಜೀವನದಲ್ಲಿ ಮಹಾತ್ಮ ಗಾಂಧೀಜಿಯವರ ಆದರ್ಶಗಳನ್ನು ಅಳವಡಿಸಿಕೊಂಡು ಸಾಧನೆ ಮಾಡಿರುವ ಕನಿಷ್ಠ 60 ವರ್ಷ ಅಥವಾ 25 ವರ್ಷ ಪೂರೈಸಿರುವ ಸೇವಾ ಸಂಸ್ಥೆಗಳು ಅರ್ಜಿ ಸಲ್ಲಿಸಬಹುದು.

ಮಹಾತ್ಮ ಗಾಂಧೀಜಿಯವರ ತತ್ವಗಳಾದ ಅಸ್ಪೃಶ್ಯತೆ ನಿವಾರಣೆ, ಅಹಿಂಸೆ, ಮಹಿಳಾ ಸಬಲೀಕರಣ, ಗ್ರಾಮೀಣ ನೈರ್ಮಲ್ಯ, ಮದ್ಯಪಾನ ವಿರೋಧಿ ನೀತಿ, ಖಾದಿ ಮತ್ತು ಸ್ವದೇಶಿ ವಸ್ತು ಬಳಕೆ, ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರ ಏಳಿಗೆ, ಈ ಕ್ಷೇತ್ರಗಳಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿರುವ ವ್ಯಕ್ತಿಗಳು ಅಥವಾ ಸಂಸ್ಥೆಗಳು ಈ ಪ್ರಶಸ್ತಿಗೆ ಅರ್ಜಿ ಸಲ್ಲಿಸಬಹುದಾಗಿದೆ. ಸಂಘ-ಸಂಸ್ಥೆಗಳು ಅಥವಾ ವ್ಯಕ್ತಿಗಳು ಅರ್ಹರ ಹೆಸರನ್ನು ಶಿಫಾರಸು ಮಾಡಬಹುದಾಗಿದೆ. ಪ್ರಶಸ್ತಿ ಮೊತ್ತ 5 ಲಕ್ಷ ರೂ.ಗಳಾಗಿದ್ದು, ಸೆ. 3ರೊಳಗೆ ಅರ್ಜಿ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ವಿಳಾಸ: ಆಯುಕ್ತರು, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ, ವಾರ್ತಾ ಸೌಧ, ನಂ. 17, ಭಗವಾನ್ ಮಹಾವೀರ ರಸ್ತೆ (ಇನ್‌ಫೆಂಟ್ರಿ ರಸ್ತೆ), ಬೆಂಗಳೂರು-560 001 ಅಥವಾ ಇ-ಮೇಲ್: informationdiprawardsg-mail.com.

ಮಾನವ ಕುಲ ಒಂದೇ ಎಂಬ ಭಾವ ಬೆಳೆಸುವುದು ಅಗತ್ಯ

ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಆದಿಚುಂಚನಗಿರಿ ಶ್ರೀ ಪ್ರತಿಪಾದನೆ

ನ್ಯೂಯಾರ್ಕ್: ''ಧರ್ಮ, ದೇಶ, ಭಾಷೆ, ಸಂಸ್ಕೃತಿ ಹಾಗೂ ವಿವಿಧ ನಂಬಿಕೆಗಳ ವೈವಿಧ್ಯತೆಯನ್ನು ಗೌರವಿಸುವುದರ ಜೊತೆಗೆ, ಇಡೀ ಮಾನವ ಕುಲ ಒಂದೇ ಎಂಬ ಅರಿವು ಮತ್ತು ಭಾವನೆಯನ್ನು ಬೆಳೆಸುವುದು ಇಂದಿನ ಅಗತ್ಯ,'' ಎಂದು ಆದಿಚುಂಚನಗಿರಿ ಮಠದ ಡಾ.ನಿರ್ಮಲಾನಂದನಾಥ ಸ್ವಾಮೀಜಿ ಪ್ರತಿಪಾದಿಸಿದರು. ನ್ಯೂಯಾರ್ಕ್‌ನಲ್ಲಿ ನಡೆದ 'ಒಂದು ಜಗತ್ತು - ಒಂದು ಮಾನವ ಕುಲ' ಅಂತಾರಾಷ್ಟ್ರೀಯ ಸಮ್ಮೇಳನದಲ್ಲಿ ಅವರು ಮಾತನಾಡಿದರು.

ಆದಿಚುಂಚನಗಿರಿ ಸ್ವಾಮೀಜಿ ಸೇರಿದಂತೆ ಸಮ್ಮೇಳನದಲ್ಲಿ ಸುಮಾರು 14 ಧರ್ಮಗಳನ್ನು ಪ್ರತಿನಿಧಿಸುವ ಧಾರ್ಮಿಕ ನಾಯಕರು ಭಾಗವಹಿಸಿ, ವಿಶ್ವಶಾಂತಿ, ಮಾನವೀಯತೆ, ಧಾರ್ಮಿಕ ಸೌಹಾರ್ದತೆ, ಪರಸ್ಪರ ಗೌರವ ಮತ್ತು ಸಹಬಾಳ್ವೆಯ ಕುರಿತು ತಮ್ಮ ಸಂದೇಶಗಳನ್ನು ಹಂಚಿಕೊಂಡರು. ರಾಷ್ಟ್ರೀಯ ಸ್ವಯಂಸೇವಕ ಸಂಘದ ಸರಸಂಘಚಾಲಕ ಮೋಹನ್ ಭಾಗವತ್ ಸಹ ಪಾಲ್ಗೊಂಡಿದ್ದರು.

ವಿಭಿನ್ನ ಧರ್ಮಗಳ ನಾಯಕರು ಒಂದೇ ವೇದಿಕೆಯಲ್ಲಿ ಒಂದಾಗಿ ಸೇರಿ 'ಒಂದು ಜಗತ್ತು - ಒಂದು ಮಾನವ ಕುಲ' ಎಂಬ ಸಾರ್ವತ್ರಿಕ ಸಂದೇಶವನ್ನು ಸಾರಿರುವುದು ವಿಶ್ವ ಸಾಮರಸ್ಯದ ದೃಷ್ಟಿಯಿಂದ ಮಹತ್ವದ ಹೆಜ್ಜೆಯಾಗಿದೆ. ಮಾನವ ಸಮಾಜವು ವಿಭಜನೆಗಳನ್ನು ಮೀರಿ ಪ್ರೀತಿ, ಕರುಣೆ, ಪರಸ್ಪರ ಗೌರವ ಮತ್ತು ಸಹಕಾರದೊಂದಿಗೆ ಮುನ್ನಡೆಯಬೇಕು. ಧರ್ಮಗಳು ಮಾನವೀಯತೆಯನ್ನು ಬೆಸೆಯುವ ಸೇತುವೆಗಳಾಗಬೇಕು ಎಂಬ ಆಶಯ ಸಮ್ಮೇಳನದಲ್ಲಿ ಪ್ರತಿಧ್ವನಿಸಿತು.

ಹಾರ್ಲೆ ಹೂವುಗಳ ಆವಾಸ ಸ್ಥಾನ ಸಂರಕ್ಷಣೆಗೆ ಸೂಚನೆ



■ **ವಿಕ ಸುದ್ದಿಲೋಕ** ಬೆಂಗಳೂರು

ಚಿಕ್ಕಮಗಳೂರು ಜಿಲ್ಲೆಯ ಕುದುರೆಮುಖ ಭಾಗದ ಕೆಲವು ಚಾರಣದ ದಾರಿಗಳಲ್ಲಿ 'ಹಾರ್ಲೆ' ಹೂವುಗಳು ಅರಳಿದ್ದು, ಆವಾಸ ಸ್ಥಾನಕ್ಕೆ ಹಾನಿಯಾಗದಂತೆ ಸಂರಕ್ಷಿಸಲು ಪ್ರವಾಸೋದ್ಯಮ ಇಲಾಖೆ ಮುಂದಾಗಿದೆ.

2022-23ನೇ ಸಾಲಿನಲ್ಲಿ ಕುದುರೆಮುಖದ ಕೆಲವು ಬೆಟ್ಟ ಪ್ರದೇಶಗಳಲ್ಲಿ ಈ ಹೂವುಗಳು ಹೆಚ್ಚಿನ ಪ್ರಮಾಣದಲ್ಲಿ ಕಂಡುಬಂದಿದ್ದರೆ, ಈ ಬಾರಿ ಸೀಮಿತ ಪ್ರಮಾಣದಲ್ಲಿ ಅರಳಿರುವುದು ಕಂಡುಬಂದಿದೆ. ನೀಲಿ ನೇರಳೆ ಬಣ್ಣದಿಂದ ಕೂಡಿರುವ ಈ ಹೂಗಳು ನೀಲಕುರಿಂಜಿ ಮಾದರಿಯಲ್ಲಿಯೇ ಕಾಣುತ್ತಿದ್ದು, ಚಾರಣ ಪ್ರಿಯರು ಹಾಗೂ ಪ್ರವಾಸಿಗರ ವಿಶೇಷ ಗಮನ ಸೆಳೆಯುತ್ತಿವೆ. ಕುದುರೆಮುಖದ ನೈಸರ್ಗಿಕ ಸೌಂದರ್ಯಕ್ಕೆ ಹೊಸ ಆಕರ್ಷಣೆ ನೀಡುತ್ತಿರುವ ಈ ಹೂಗಳ ಆವಾಸ ಸ್ಥಾನಕ್ಕೆ ಹಾನಿಯಾಗದಂತೆ ಸಂರಕ್ಷಿಸಲು ಪ್ರವಾಸೋದ್ಯಮ ಇಲಾಖೆಯು ಚಿಕ್ಕಮಗಳೂರು ಜಿಲ್ಲೆಯ ಅಧಿಕಾರಿಗಳಿಗೆ ನಿರ್ದೇಶನ ನೀಡಿದೆ.

ಪರಿಸರಪ್ರೇಮಿ ಪ್ರವಾಸ ಕೈಗೊಳ್ಳಿ: ಕುದುರೆಮುಖವು ಪಶ್ಚಿಮಘಟ್ಟಗಳ ಪ್ರಮುಖ ಜೀವವೈವಿಧ್ಯ ಪ್ರದೇಶವಾಗಿದ್ದು, ಚಾರಣ, ಪ್ರಕೃತಿ ವೀಕ್ಷಣೆ ಹಾಗೂ ಪರಿಸರ ಪ್ರವಾಸೋದ್ಯಮಕ್ಕೆ ಪ್ರಸಿದ್ಧವಾಗಿದೆ. ಈ ಹೂವುಗಳ ಅರಳುವಿಕೆ ಪ್ರಕೃತಿಯ ವಿಶಿಷ್ಟ ಪರಿಸರ ಚಕ್ರದ ಭಾಗವಾಗಿದೆ. ಈ ಹೂವುಗಳನ್ನು ವೀಕ್ಷಿಸಲು ಬರುವ ಪ್ರವಾಸಿಗರು ಅವುಗಳನ್ನು ಕೀಳದಂತೆ, ಗಿಡಗಳಿಗೆ ಹಾನಿ ಮಾಡದಂತೆ ಹಾಗೂ ಪರಿಸರದ ಸ್ವಚ್ಛತೆ ಕಾಪಾಡುವಂತೆ ಇಲಾಖೆ ಮನವಿ ಮಾಡಿದೆ.

> ಈ ಹೂವುಗಳು ಮತ್ತು ಅವುಗಳ ಆವಾಸ ಸ್ಥಳಕ್ಕೆ ಯಾವುದೇ ಹಾನಿಯಾಗದಂತೆ ಪ್ರವಾಸಿಗರಿಗೆ ಅಗತ್ಯ ಮಾಹಿತಿ, ಮಾರ್ಗದರ್ಶನ ಮತ್ತು ಸೌಲಭ್ಯಗಳನ್ನು ಒದಗಿಸುವ ಕುರಿತು ಜಿಲ್ಲೆಯ ಪ್ರವಾಸೋದ್ಯಮ ಇಲಾಖೆಯ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.
> **- ಡಾ. ರಾಮ್ ಪ್ರಸಾತ್ ಮನೋಹರ್** ಕಾರ್ಯದರ್ಶಿ, ಪ್ರವಾಸೋದ್ಯಮ ಇಲಾಖೆ

''ಕುದುರೆಮುಖದ ಬೆಟ್ಟಗಳಲ್ಲಿ ಅರಳಿರುವ ಈ ಹೂಗಳು ಕರ್ನಾಟಕದ ಪ್ರಕೃತಿ ಸಂಪತ್ತಿನ ಅಪೂರ್ವ ಸೌಂದರ್ಯವನ್ನು ನಮಗೆ ಪರಿಚಯಿಸುತ್ತವೆ. ಇಂತಹ ನೈಸರ್ಗಿಕ ವಿಶೇಷತೆ ವೀಕ್ಷಿಸಲು ತೆರಳುವ ಸಂದರ್ಭದಲ್ಲಿ ಪರಿಸರಸ್ನೇಹಿ ಪ್ರವಾಸ ಕೈಗೊಳ್ಳಬೇಕು. ಪ್ರವಾಸಿಗರು ಪ್ರಕೃತಿಯ ಸೌಂದರ್ಯವನ್ನು ಆಸ್ವಾದಿಸುವುದರ ಜತೆಗೆ ಅದರ ಸಂರಕ್ಷಣೆಯ ಜವಾಬ್ದಾರಿಯನ್ನೂ ಅರಿತುಕೊಳ್ಳಬೇಕು,'' ಎಂದು ಇಂಧನ ಹಾಗೂ ಪ್ರವಾಸೋದ್ಯಮ ಸಚಿವ ಕೆ.ಜೆ.ಜಾರ್ಜ್ ತಿಳಿಸಿದ್ದಾರೆ.

ಅರೆವೈದ್ಯಕೀಯ ಡಿಪ್ಲೊಮಾ ಕೋರ್ಸ್‌ಗಳಿಗೆ ಅರ್ಜಿ ಆಹ್ವಾನ

ಬೆಂಗಳೂರು: ಸರಕಾರಿ ವೈದ್ಯಕೀಯ ಮಹಾವಿದ್ಯಾಲಯ ಹಾಗೂ ಇತರೆ ಸರಕಾರಿ ಆಸ್ಪತ್ರೆಗಳು ಹಾಗೂ ರಾಜ್ಯದ ಖಾಸಗಿ ಪ್ಯಾರಾ ಮೆಡಿಕಲ್ ಸಂಸ್ಥೆಗಳಲ್ಲಿನ 2026-27ನೇ ಸಾಲಿನ ಅರೆ ವೈದ್ಯಕೀಯ ಡಿಪ್ಲೊಮಾ ಕೋರ್ಸ್‌ಗಳ ಸರಕಾರಿ ಕೋಟಾದ ಸೀಟುಗಳಿಗೆ ಅರ್ಹ ಅಭ್ಯರ್ಥಿಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಭ್ಯರ್ಥಿಗಳು 1ನೇ ತರಗತಿಯಿಂದ ಪಿಯುಸಿವರೆಗೆ ಕರ್ನಾಟಕದಲ್ಲಿ ಓದಿರಬೇಕು. ಇದಕ್ಕೆ ಸಂಬಂಧಿಸಿದ ದೃಢೀಕರಣ ಪತ್ರವನ್ನು ಅರ್ಜಿ ಜತೆ ಸಲ್ಲಿಸಬೇಕು ಎಂದು ಸೂಚಿಸಲಾಗಿದೆ.

ಡಿಪ್ಲೊಮಾ ಇನ್ ಮೆಡಿಕಲ್ ಲ್ಯಾಬೋರೇಟರಿ ಟೆಕ್ನಾಲಜಿ, ಡಿಪ್ಲೊಮಾ ಇನ್ ಮೆಡಿಕಲ್ ರೆಡಿಯಾಲಜಿ ಮತ್ತು ಇಮೆಜಿಂಗ್ ಟೆಕ್ನಾಲಜಿ, ಡಿಪ್ಲೊಮಾ ಇನ್ ಡಯಾಲಿಸಿಸ್ ಟೆಕ್ನಾಲಜಿ, ಅನಸ್ತೇಶಿಯಾ ಮತ್ತು ಆಪರೇಷನ್ ಥಿಯೇಟರ್ ಟೆಕ್ನಾಲಜಿ ಹಾಗೂ ಡಿಪ್ಲೊಮಾ ಇನ್ ಅಪ್ತಾಲ್ಮಿಕ್ ಅಸಿಸ್ಟೆಂಟ್ ಕೋರ್ಸ್‌ಗಳಿಗೆ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದಾಗಿದೆ. ಸೆ.1 ರಿಂದ ಸೆ.21ರವರೆಗೆ ಅರ್ಜಿ ಸಲ್ಲಿಸಲು ಅವಕಾಶವಿರಲಿದ್ದು, ಮಂಡಳಿಯ ಜಾಲತಾಣದಲ್ಲಿ ಅರ್ಜಿ ಲಭ್ಯವಿದೆ ಎಂದು ಕರ್ನಾಟಕ ನರ್ಸಿಂಗ್ ಹಾಗೂ ಅರೆ ವೈದ್ಯಕೀಯ ವಿಜ್ಞಾನಗಳ ಶಿಕ್ಷಣ (ನಿಯಂತ್ರಣ) ಪ್ರಾಧಿಕಾರ ತಿಳಿಸಿದೆ.

ರಾಜ್ಯದಲ್ಲಿ 580ಕ್ಕೂ ಹೆಚ್ಚು ನಕಲಿ ವೈದ್ಯರು

■ **ಮಯೂರ್ ಹೆಗಡೆ** ಬೆಂಗಳೂರು
mayur.hegde@timesofindia.com

ರಾಜ್ಯದಲ್ಲಿ ಕಳಪೆ ಔಷಧ ಪ್ರಕರಣ ಸದ್ದು ಮಾಡುತ್ತಿರುವ ನಡುವೆಯೇ ನಕಲಿ ವೈದ್ಯರ ಹಾವಳಿಯೂ ಹೆಚ್ಚಾಗಿದೆ. ಕಳೆದ ಮೂರು ವರ್ಷಗಳಲ್ಲಿ ಬರೋಬ್ಬರಿ 580ಕ್ಕೂ ಅಧಿಕ ನಕಲಿ ವೈದ್ಯರು ಪತ್ತೆಯಾಗಿದ್ದು, ಅವರ ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ.

ದಾವಣಗೆರೆಯ ಕೋನಸಾಗರದಲ್ಲಿ ನಕಲಿ ವೈದ್ಯೆ ಚುಚ್ಚುಮದ್ದು ನೀಡಿದ ಹಿನ್ನೆಲೆಯಲ್ಲಿ ರೈತರೊಬ್ಬರು ಪ್ರಾಣವನ್ನೇ ಕಳೆದುಕೊಂಡ ಪ್ರಕರಣದಿಂದ ನಕಲಿ ವೈದ್ಯರ ಜಾಲದ ಕರಾಳ ಮುಖ ಬಯಲಾಗಿದೆ. ಅವರು ಅನಧಿಕೃತವಾಗಿ ಆಸ್ಪತ್ರೆ ತೆರೆಯುವುದು, ಮನೆಯಲ್ಲೇ ಕ್ಲಿನಿಕ್ ನಡೆಸುವುದು ಮಾತ್ರವಲ್ಲದೆ ಪ್ರಯೋಗಾಲಯವನ್ನೂ ನಡೆಸುತ್ತಿದ್ದಾರೆ. ಬಂಧಿತರಾಗಿ ಜಾಮೀನು ಪಡೆದು ಬಂದು ಪುನಃ ಬೇರೆ ಹೆಸರಿನಲ್ಲಿ ಕ್ಲಿನಿಕ್ ತೆರೆಯುತ್ತಿರುವುದು ಕಂಡು ಬರುತ್ತಿದೆ.

ಆರೋಗ್ಯ ಇಲಾಖೆಯು ನಡೆಸಿದ ಕಾರ್ಯಾಚರಣೆಯಲ್ಲಿ 3 ವರ್ಷಗಳಲ್ಲಿ 582 ನಕಲಿ ವೈದ್ಯರ ಪ್ರಕರಣಗಳು ದಾಖಲಾಗಿದ್ದು, ಅವರ ಕ್ಲಿನಿಕ್‌ಗಳನ್ನು ಮುಚ್ಚಿಸಲಾಗಿದೆ. 87 ನಕಲಿ ವೈದ್ಯರಿಗೆ ದಂಡ ವಿಧಿಸಲಾಗಿದೆ. ಆದರೆ, 128 ನಕಲಿ ವೈದ್ಯರು ದಂಡ ಪಾವತಿಸಿಲ್ಲ, ಅಲ್ಲದೆ, ಈ ಸಂಬಂಧ 29 ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿವೆ. ಈ ಅವಧಿಯಲ್ಲಿ ಕರ್ನಾಟಕ ಆಯುರ್ವೇದ ಮತ್ತು ಯುನಾನಿ ವೈದ್ಯ ಮಂಡಳಿ ಕೂಡ ತನ್ನ ವ್ಯಾಪ್ತಿಯಲ್ಲಿ ದಾಳಿ ನಡೆಸಿ ನೋಂದಣಿ ಮಾಡಿಕೊಳ್ಳದ ಹಾಗೂ ಪರವಾನಗಿ ಇಲ್ಲದ ಹತ್ತಾರು ನಕಲಿ ವೈದ್ಯರನ್ನು ಗುರುತಿಸಿದೆ.

87
ನಕಲಿ ವೈದ್ಯರಿಗೆ ದಂಡ

29
ಪ್ರಕರಣಗಳು ನ್ಯಾಯಾಲಯಗಳಲ್ಲಿ ವಿಚಾರಣೆ ಹಂತದಲ್ಲಿವೆ

ಸಿಕ್ಕಿಬಿದ್ದ ನಕಲಿ ವೈದ್ಯರು (2024-2026)

ಜಿಲ್ಲೆ	ಪತ್ತೆಯಾದವರು
ಕಲಬುರಗಿ	127
ರಾಯಚೂರು	124
ಧಾರವಾಡ	75
ಕೋಲಾರ	31
ವಿಜಯಪುರ	24
ಬಳ್ಳಾರಿ	23
ದಕ್ಷಿಣ ಕನ್ನಡ	20
ಬೆಂಗಳೂರು ನಗರ	16

> ನಕಲಿ ಔಷಧಿ ಜಾಲದಂತೆ ನಕಲಿ ವೈದ್ಯರಿಗೂ ಕಡಿವಾಣ ಹಾಕಲಾಗುವುದು. ಅಂಥವರ ಪತ್ತೆಗೆ ಯೋಜನೆ ರೂಪಿಸುತ್ತೇವೆ. ಸಿಕ್ಕಿಬಿದ್ದಲ್ಲಿ ವಿಳಂಬವಿಲ್ಲದೆ ಕಟ್ಟುನಿಟ್ಟಿನ ಕ್ರಮ ವಹಿಸುತ್ತೇವೆ. ಜನರು ಮಾಹಿತಿ ಕೊಟ್ಟರೂ ಕ್ರಮ ವಹಿಸುತ್ತೇವೆ.
> **- ಯು.ಟಿ.ಖಾದರ್** ಆರೋಗ್ಯ ಸಚಿವ



ದಾಳಿಗೆ ವಿಶೇಷ ಪಡೆ: 'ನಕಲಿ ವೈದ್ಯರನ್ನು ಪತ್ತೆ ಮಾಡಲು ರಾಜ್ಯ ಸರಕಾರ 2017ರಲ್ಲೇ ಆಯಾ ಜಿಲ್ಲೆಯ ಜಿಲ್ಲಾಧಿಕಾರಿಗಳ ನೇತೃತ್ವದಲ್ಲಿ ಎಸ್‌ಪಿ, ಆಯುಷ್ ಅಧಿಕಾರಿ ಹಾಗೂ ಇತರರನ್ನು ಒಳಗೊಂಡ ಜಿಲ್ಲಾ ಮಟ್ಟದ ವಿಶೇಷ ಪಡೆಯನ್ನು ರಚಿಸಿದೆ. ಈ ಪಡೆಯ ನಿರಂತರ ದಾಳಿ ಹೊರತಾಗಿಯೂ ನಕಲಿ ವೈದ್ಯರ ಜಾಲ ಸಕ್ರಿಯವಾಗಿದೆ. ಹೆಚ್ಚಿನವರು ಸಣ್ಣಪುಟ್ಟ ಗಲ್ಲಿ, ಕೊಳೆಗೇರಿಗಳಲ್ಲಿ ಕ್ಲಿನಿಕ್‌ಗಳನ್ನು ತೆರೆದು ಚಿಕಿತ್ಸೆ, ಔಷಧ ನೀಡುವುದನ್ನು ಮಾಡುತ್ತಿದ್ದಾರೆ. ನಗರ ಪ್ರದೇಶದಲ್ಲೂ ಇಂಥವರಿದ್ದು, ನಂಬಿ ಹೋದವರ ಪ್ರಾಣಕ್ಕೆ ಕುತ್ತು ತರುತ್ತಿದ್ದಾರೆ.

ಕಾರ್ಯಾಚರಣೆಯಲ್ಲಿ ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಭಾಗದಲ್ಲೇ ಹೆಚ್ಚಿನ ಸಂಖ್ಯೆಯಲ್ಲಿ ನಕಲಿ ವೈದ್ಯರು ಪತ್ತೆಯಾಗುತ್ತಿದ್ದಾರೆ. ಕಲಬುರಗಿ, ರಾಯಚೂರು, ಧಾರವಾಡ ಹಾಗೂ ವಿಜಯಪುರ ಜಿಲ್ಲೆಗಳಲ್ಲೇ ಅವರ ಸಂಖ್ಯೆ ಹೆಚ್ಚಾಗಿದೆ.

''ಅನಧಿಕೃತವಾಗಿ ವೈದ್ಯಕೀಯ ವೃತ್ತಿ ನಡೆಸುತ್ತಿರುವುದು ಕಂಡು ಬಂದಲ್ಲಿ ಕೆಪಿಎಂಇ ತಿದ್ದುಪಡಿ ಅಧಿನಿಯಮ 2017ರ ಸೆಕ್ಷನ್ 19 ಕಲಂ ಅನ್ವಯ 3 ವರ್ಷದವರೆಗೆ ಕಾರಾಗೃಹ ಶಿಕ್ಷೆ ಮತ್ತು 1 ಲಕ್ಷ ರೂ.ವರೆಗೆ ದಂಡ ವಿಧಿಸಲಾಗುತ್ತದೆ. ಯಾವುದೇ ಖಾಸಗಿ ವೈದ್ಯಕೀಯ ಸಂಸ್ಥೆಯನ್ನು ನೋಂದಣಿ ಮಾಡದೇ ನಡೆಸುತ್ತಿರುವುದು ಪತ್ತೆಯಾದರೆ ಅದನ್ನು ಮುಚ್ಚಿಸಲಾಗುತ್ತಿದೆ. 15ನೇ ಕಲಂ ಪ್ರಕಾರ ಕೆಪಿಎಂಇ ನೋಂದಣಿ ಮತ್ತು ಕುಂದು ಕೊರತೆ ನಿವಾರಣಾ ಪ್ರಾಧಿಕಾರದ ನಿರ್ದೇಶನ ಪಾಲಿಸದಿದ್ದರೆ 50 ಸಾವಿರ ರೂ. ದಂಡ ವಿಧಿಸಿ ನೋಂದಣಿ ರದ್ದು ಪಡಿಸಲಾಗುತ್ತದೆ,'' ಎಂದು ಆರೋಗ್ಯ ಇಲಾಖೆ ಅಧಿಕಾರಿಗಳು ತಿಳಿಸಿದರು.

ಮೀನುಗಾರಿಕೆ ಬೋಟ್ ಮುಳುಗಡೆ

24 ಮೀನುಗಾರರ ರಕ್ಷಣೆ

■ **ವಿಕ ಸುದ್ದಿಲೋಕ** ಕಾರವಾರ

ಇಲ್ಲಿನ ಅಂಜದೀವ್ ದ್ವೀಪದ ಸಮೀಪ ಅರಬ್ಬಿ ಸಮುದ್ರದಲ್ಲಿ ಭಾನುವಾರ ಬೆಳಗ್ಗೆ ಮೀನುಗಾರಿಕಾ ಬೋಟ್‌ವೊಂದು ಮುಳುಗಿದ್ದು, ಅದರಲ್ಲಿದ್ದ 24 ಮೀನುಗಾರರನ್ನು ರಕ್ಷಣೆ ಮಾಡಲಾಗಿದೆ.

ಅಂಕೋಲಾ ತಾಲೂಕಿನ ಬೆಳಬಾರ ಮೂಲದ ನೀಲಕಂಠ ಖಾರ್ವಿ ಅವರಿಗೆ ಸೇರಿದ 'ಶ್ರೀ ಮಾತಾ' ಹೆಸರಿನ ಮೀನುಗಾರಿಕಾ ಬೋಟ್ ಮುಳುಗಡೆಯಾಗಿದೆ. ತಕ್ಷಣ ಸಮೀಪದಲ್ಲಿದ್ದ ಐದು ಮೀನುಗಾರಿಕಾ ಬೋಟ್‌ಗಳು ಸ್ಥಳಕ್ಕೆ ಧಾವಿಸಿ ಮೀನುಗಾರರನ್ನು ರಕ್ಷಿಸಿದ್ದಾರೆ. ಬಲೆ ಸೇರಿ ಸಾಕಷ್ಟು ಪರಿಕರಗಳು ಹಾನಿಯಾಗಿವೆ. 80 ಲಕ್ಷ ರೂ.ಗಳಿಗೂ ಅಧಿಕ ನಷ್ಟವಾಗಿದೆ ಎಂದು ಅಂದಾಜಿಸಲಾಗಿದೆ. ಇತರ ಬೋಟ್‌ಗಳ ಮೂಲಕ ಬೋಟ್ ಎತ್ತುವ ಪ್ರಯತ್ನವೂ ನಡೆದಿತ್ತು.